**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 313/2015**

| | | |
|---|---|---|
| ಹೆಸರು | ಶಾಂತಾ | ಪಿಡಬ್ಲ್ಯೂ -12<br>ಸಿಡಬ್ಲ್ಯೂ -12 |
| ಗಂಡನ ಹೆಸರು | ಪರಶುರಾಮ | |
| ವಯಸ್ಸು | 42 ವರ್ಷ | |
| ಉದ್ಯೋಗ | ಅಂಗನವಾಡಿ ಶಿಕ್ಷಕಿ | ದಿ: 22.02.2022 |
| ವಾಸ ಸ್ಥಳ | ತಿಮಲಾಪುರ ಗ್ರಾಮ, ಹರಿಹರ | |
| ಮುಖ್ಯ ವಿಚಾರಣೆ | ಸಹಾಯಕ ಸರ್ಕಾರಿ ಅಭಿಯೋಜಕರಿಂದ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ನಾನು ಈಗ 26 ವರ್ಷಗಳಿಂದ ಹರಿಹರ ತಾಲೂಕಿನ ಹನಗವಾಡಿ ಗ್ರಾಮದಲ್ಲಿ ಅಂಗನವಾಡಿ ಶಿಕ್ಷಕಿಯಾಗಿ ಕೆಲಸ ಮಾಡಿಕೊಂಡು ಬಂದಿದ್ದೇನೆ.

ಆರೋಪಿ ನನಗೆ ಗೊತ್ತು. ಆತ ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಂಪನಿಯಲ್ಲಿ ಕೆಲಸ ಮಾಡುತ್ತಿರುವುದಾಗಿ ನಮಗೆ ಪರಿಚಯ ಮಾಡಿಕೊಂಡಿರುತ್ತಾರೆ. ಸದರಿ ಆರೋಪಿ ನನಗೆ ನಮ್ಮ ಸಿಡಿಪಿಓ ರವರಿಂದ ಪರಿಚಯವಾಗಿರುತ್ತಾನೆ. ಸನ್ 2010 ರ ನವೆಂಬರ ತಿಂಗಳಿನಲ್ಲಿ ಹರಿಹರ ನಗರದಲ್ಲಿರುವ ಆರೋಪಿ ಕಂಪನಿಯ ಕಛೇರಿಯಲ್ಲಿ ಸಭೆ ಕರೆದಿದ್ದು, ನಾನು ಸಹ ಸದರಿ ಸಭೆಗೆ ಹೋಗಿದ್ದೆನು. ಸದರಿ ಸಭೆಯಲ್ಲಿ ಆರೋಪಿಯು ತಾನು ಭೂಮಿಕಾ ಮೈಕ್ರೋ ಇನ್ಸುರೆನ್ಸ ಕಂಪನಿಯಲ್ಲಿ ಏಜೆಂಟ ನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ನೀವು ಸಹ ಸಾರ್ವಜನಿಕರಿಂದ ಮೂರು ತಿಂಗಳಿಗೊಮ್ಮೆ ಆರು ತಿಂಗಳಿಗೊಮ್ಮೆ ಇನ್ಸುರೆನ್ಸ ಹಣವನ್ನು ತುಂಬಿಸಿದರೆ ನಿಮಗೆ ಕಮೀಷನ್ ಸಿಗುತ್ತದೆ, ಸದರಿ ಸಭೆಯಲ್ಲಿ ಆರೋಪಿ 100 ರೂ. ಇನ್ಸುರೆನ್ಸ ಮಾಡಿಸಿದ್ದಲ್ಲಿ, ಆ ವ್ಯಕ್ತಿ ತೀರಿಕೊಂಡರೆ 30 ಸಾವಿರ ಹಣ ಬರುತ್ತದೆ ಎಂದು ಹೇಳಿರುತ್ತಾನೆ. ಒಂದು ವೇಳೆ ಇನ್ಸುರೆನ್ಸ ಮಾಡಿದ ವ್ಯಕ್ತಿ ಮರಣ ಹೊಂದದೇ ಇದ್ದಲ್ಲಿ ಪಾಲಸಿ ಅವಧಿ ಮುಗಿದ ನಂತರ ಪಾಲಸಿ ಹಣಕ್ಕೆ ಬೋನಸ್ ಹಾಕಿ ಹಣ ಮರುಪಾವತಿ ಮಾಡಲಾಗುವುದು ಎಂದು ತಿಳಿಸಿರುತ್ತಾನೆ. ಅದಕ್ಕೆ ನಾನು ಒಪ್ಪಿದ್ದು, ನನಗೆ ಕೋಡ್ ನಂಬರ 0005 ಅಂತ ಪಾಲಸಿ ಮಾಡಲು ಕೊಟ್ಟಿರುತ್ತಾರೆ. ಆತನ ಹೇಳಿಕೆಯ ಮೇರೆಗೆ ನಾನು 58 ಪಾಲಸಿಗಳನ್ನು ಶಿವಮೊಗ್ಗ ವಿಭಾಗದಿಂದ ಮಾಡಿಸಿರುತ್ತೇನೆ. ಸದರಿ ಪಾಲಸಿಗಳನ್ನು 2011 ರಿಂದ 2013 ರ ಅವಧಿಯಲ್ಲಿ ಮಾಡಿಸಿರುತ್ತೇನೆ. ಸದರಿ ಪಾಲಸಿದಾರರಿಂದ ಹಣ ಸಂಗ್ರಹಿಸಿಕೊಂಡು ಆರೋಪಿಯ ಕಛೇರಿಯಲ್ಲಿ ಹಣವನ್ನು ಕಟ್ಟಿಕೊಳ್ಳುತ್ತಾ ಬಂದಿರುತ್ತೇನೆ. ನಾನು ಹಣ ತುಂಬಿದ ಬಗ್ಗೆ ಆರೋಪಿ ಕಛೇರಿಯಿಂದ ಕೆಲವೊಂದು ರಶೀದಿಯನ್ನು ಕೊಟ್ಟಿರುತ್ತಾರೆ. ನಾನು ಸದರಿ 58 ಜನ ಪಾಲಸಿದಾರರಿಂದ ಒಟ್ಟು ರೂ.72 ಸಾವಿರದ ಚಿಲ್ಲರೆ ಹಣವನ್ನು ಆರೋಪಿಯ ಕಛೇರಿಯಲ್ಲಿ ತುಂಬಿರುತ್ತೇನೆ.

ನಾವು ಶಿವಮೊಗ್ಗ ಕಛೇರಿಗೆ ಭೇಟಿ ನೀಡಿದಾಗ ಆರೋಪಿ ನಾವು ತುಂಬಿದ ಹಣವನ್ನು ದುರುಪಯೋಗ ಪಡಿಸಿಕೊಂಡು ಕೇವಲ ರೂ.9,400/- ಮಾತ್ರ ಕಟ್ಟಿರುವ ಬಗ್ಗೆ ಗೊತ್ತಾಗಿರುತ್ತದೆ ನಾವು

ಕಟ್ಟಿದ ಉಳಿದ ಹಣವನ್ನು ಆರೋಪಿ ಶಿವಮೊಗ್ಗ ಕಛೇರಿಯಲ್ಲಿ ಕಟ್ಟಿರುವುದಿಲ್ಲವೆಂದು ಗೊತ್ತಾಗಿರುತ್ತದೆ. ಕಾರಣ ನಾವು ಆರೋಪಿ ನಾವು ಕಟ್ಟಿದ ಹಣ ದೂರುಪಯೋಗ ಮಾಡಿಕೊಂಡ ಕುರಿತು ಶಿವಮೊಗ್ಗ ಕಛೇರಿಯವರಿಗೆ ಆರೋಪಿ ವಿರುದ್ಧ ದೂರು ನೀಡಿರುತ್ತೇವೆ. ಈಗ ನೋಡುತ್ತಿರುವ ದೂರು ನಾನು ಆರೋಪಿ ವಿರುದ್ಧ ನೀಡಿರುವ ದೂರಾಗಿದ್ದು, ಅದನ್ನು ನಿಪಿ 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ 12 (ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಯು ಪಾಲಸಿದಾರರ ಒಟ್ಟು 34 ಬ್ಯಾಂಕ್ ಪುಸ್ತಕಗಳನ್ನು ಹಾಜರುಪಡಿಸುತ್ತಿದ್ದು, ಅವುಗಳನ್ನು ಒಟ್ಟಾಗಿ ನಿಪಿ –13 ಎಂದು ಗುರುತಿಸಲಾಯಿತು.

**ಪಾಟಿಸವಾಲುಃ**

ಆರೋಪಿ ಪರ ಶ್ರೀ ಆರ್ ಪಿ ವಕೀಲರ ಪರವಾಗಿ ಶ್ರೀ ಎಮ್ ಟಿ ವಕೀಲರು ಪಾಟಿಸವಾಲಿಗಾಗಿ ಕಾಲಾವಕಾಶ ಕೋರುತ್ತಿದ್ದು, ಪಾಟಿಸವಾಲನ್ನು ಮುಂದೂಡಲು ಯಾವುದೇ ಸಕಾರಣಗಳು ಕಂಡು ಬರದೇ ಇರುವುದರಿಂದ ಪಾಟಿ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ** ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆಎಂಎಫ್‌ಸಿ, ಹರಿಹರ.